ತೆಗೆಯಲು ಸಾಧ್ಯ. ಇದೇ ಸಾಹಸವನ್ನು ಕಾದಂಬರಿಗೆ ಹಾಕಲಾರೆ. ನಾನು ಯಾವುದನ್ನೂ ಸಿನಿಮಾಕ್ಕೆಂದೇ ಬರೆಯಲಿಲ್ಲ. ಪ್ರಶಸ್ತಿಗಳು ಬರುತ್ತವೆಂದು 'ಗೆಸ್' ಮಾಡಲಿಲ್ಲ. ನನ್ನ ಐತಿಹಾಸಿಕ ಕಾದಂಬರಿಗಳನ್ನು ಓದಿದ ಲೇಖಕ ಕೃಷ್ಣಮೂರ್ತಿ ಹನೂರು ಅವರು 'ನೀವು ತ.ರಾ.ಸು ಅವರಿಗಿಂತ ವಿಭಿನ್ನವಾಗಿ, ಆಕರ್ಷಕವಾಗಿ, ಇತಿಹಾಸನಿಷ್ಠವಾಗಿ ಬರೆಯುತ್ತೀರಿ,' ಎಂದು ಹೇಳಿದಾಗ ಶ್ರಮ ಸಾರ್ಥಕವೆನ್ನಿಸಿದೆ. ನನ್ನ 'ಆತ್ಮಕಥೆ' ಓದಿ ತಾವಾಗಿಯೇ 'ಪ್ರಜಾವಾಣಿ'ಗೆ ವಿಮರ್ಶೆ ಬರೆದು ಸತ್ಯಕ್ಕೆ ಸಮೀಪವಾದ ಆತ್ಮಕಥೆ' ಎಂದು ಬರಗೂರು ರಾಮಚಂದ್ರಪ್ಪ ಅವರು ಘೋಷಿಸಿದಾಗ ಖುಷಿಯಾಗಿದೆ. 'ನೀವು ಜನಪ್ರಿಯ ಸಾಹಿತಿಯಷ್ಟೇ ಅಲ್ಲ ಜನಪರ ಸಾಹಿತಿಯಾಗಿರುವುದಲೇ ನನಗೆ ಇಷ್ಟವಾಗುತ್ತೀರಿ. ಓದುಗರ ಮನವನ್ನೂ ಗೆದ್ದಿದ್ದೀರಿ' ಎಂದು ಕವಿ ಎಸ್.ಜಿ. ಸಿದ್ಧರಾಮಯ್ಯನವರು ಸಮಾರಂಭ ಒಂದರಲ್ಲಿ ಹೇಳಿದಾಗ ಸಮಾಧಾನವಾಗಿದೆ. 'ಸೆಕೆಂಡ್ ಸಾಟರ್ಡೇ ಸಂಡೇ ಸಾಹಿತಿ' ಎಂದು ನಟ ವಿಷ್ಣುವರ್ಧನ್ ಅವರಿಂದ ತಮಾಷೆಗೊಳಗಾಗುತ್ತಲೇ ಅವರ ಚಿತ್ರಗಳ ನೆಚ್ಚಿನ ಸಂಭಾಷಣಾಕಾರನಾದೆ ನಾನು. ಆದರೆ ಇತ್ತ ಸಾಹಿತ್ಯವಲಯದವರು ನನ್ನನ್ನು ಸಾಹಿತಿಯೆಂದು ಪರಿಗಣಿಸಲು ಹಿಂದೆಮುಂದೆ ನೋಡುತ್ತಿದ್ದ ಕಾಲ ಒಂದಿತ್ತು. ಸಿನಿಮಾದವರೂ ಸಹ ನಿಮ್ಮದು 'ಗೆಸ್ಟ್ ಅಪಿಯರೆನ್ಸ್' ಅನ್ನುತ್ತಾ ನಾನು ಅವರವನು ಎಂದುಕೊಳ್ಳಲು ಅವರಿಗೂ ಬಿಗುಮಾನ. ಆದರೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಹಾಗೆಯೇ ಇತ್ತೀಚೆಗೆ ಜೀವಮಾನ ಸಾಧನೆಗಾಗಿ ಕರ್ನಾಟಕ ಚಲನಚಿತ್ರ ಅಕಾಡೆಮಿ 'ಹುಣಸೂರು ಕೃಷ್ಣಮೂರ್ತಿ ಪ್ರಶಸ್ತಿ' ನೀಡಿ ಒಪ್ಪಿಕೊಂಡಾಗ ಎರಡೂ ಕ್ಷೇತ್ರಗಳಲ್ಲಿ ದುಡಿದ ಶ್ರಮ ಸಾರ್ಥಕವೆನ್ನಿಸಿದೆ.

ಈವರೆಗೆ ಮೂವತ್ತು ಕಾದಂಬರಿಗಳು, ಹನ್ನೊಂದು ಕಥಾಸಂಕಲನಗಳು ನಾಲ್ಕು ಅಂಕಣ ಬರಹಗಳು ನಾಲ್ಕು ನಾಟಕಗಳು ಅರವತ್ತುಮೂರು ಚಲನಚಿತ್ರಗಳಿಗೆ ಸಂಭಾಷಣೆ ಬರೆದಿದ್ದರ ಹಿಂದೆ ಅಧ್ಯಯನ, ಪರಿಶ್ರಮ, ಸಾಮಾಜಿಕ ಬದ್ಧತೆ, ಪ್ರಾಮಾಣಿಕತೆ, ಆತ್ಮವಿಶ್ವಾಸ, ಇತರರ ಯಶಸ್ಸನ್ನು ಕಂಡು ಸಹಿಸುವ, ಸಂತೋಷಿಸುವ ಗುಣ, ಜೀವನೋತ್ಸಾಹ, ಸದಾ ಅಪ್‌ಡೇಟ್ ಆಗಬೇಕೆಂಬ ತಹತಹ ಇರುವ ಎಂಥವರೂ ಲೇಖಕರಾಗಬಹುದೆನ್ನುವುದಕ್ಕೆ ನಾನೇ ಒಂದು ಉದಾಹರಣೆ.

ಬರೆಯುವವನಿಗೆ ಬರಹ ಒಂದೇ ಗುರಿಯಾಗಿರಬೇಕು. ಟೀಕೆ–ಟಿಪ್ಪಣಿಗಳನ್ನೂ ಸ್ವಾಗತಿಸಿಯೂ ಬರೆಯಬೇಕು. 'ವೇಣು ಅವರು ಎಂದೂ ವಿಮರ್ಶಕರ ಡಾರ್ಲಿಂಗ್ ಆಗಲೇ ಇಲ್ಲ. ವೇಣು ಓದುಗರ ಡಾರ್ಲಿಂಗ್' ಎಂದು ವಿಮರ್ಶಿಸಿದ ಲೋಕೇಶ ಅಗಸನಕಟ್ಟೆಯವರ ಮಾತಿಗೂ ನನ್ನ ಸಹಮತವಿದೆ. ನನ್ನ ಕತೆಗಳನ್ನು ಓದಿ ನನಗೆ ಬೆದರಿಕೆ ಕರೆಗಳನ್ನು ಮಾಡಿ ಹೆದರಿಸಲು ಪ್ರಯತ್ನಿಸಿದ್ದೂ ಉಂಟು. ಜನಪರವಾಗಿದ್ದು ಧರ್ಮವನ್ನು ಟೀಕಿಸಿ ಬರೆದಾಗ ಇದೆಲ್ಲಾ ಸಾಮಾನ್ಯ ಪ್ರತಿಕ್ರಿಯೆಯೆಂದು ಭಾವಿಸಿದ್ದೇನಷ್ಟೆ. ನಾನು ನನ್ನ ಆರೋಗ್ಯಕ್ಕಾಗಿ ಬರೆಯುತ್ತೇನೆ. ತಮಗಾದ ಅನುಭವಗಳನ್ನು ಕತೆಯಾಗಿಸುವಾಗ ಅತ್ಯಂತ ಪ್ರಾಮಾಣಿಕವಾಗಿ ಇರಬೇಕೆನ್ನುವುದಷ್ಟೇ ನಮ್ಮ ಜವಾಬ್ದಾರಿ. ತಾವು ಬರೆದದ್ದನ್ನು ತಾವೇ ಪಾಲಿಸದಿದ್ದರೆ ಉಳಿದವರನ್ನು ನೈತಿಕವಾಗಿ ಪ್ರಶ್ನಿಸುವ ಯಾವ ಅರ್ಹತೆಯನ್ನೂ ಲೇಖಕನಾದವನು ಹೊಂದಿರುವುದಿಲ್ಲ, ಅಲ್ಲವೆ?

*